**ದಿನಾಂಕಃ 20-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಸ್.ಎಲ್.ಎಲ್. ವಕೀಲರಿಂದಃ**

1. ಪ್ರತಿವಾದಿಯರು ಸಿದ್ದನಾಳ ಗ್ರಾಮದವರು ಆಗಿರುತ್ತಾರೆ. ಪ್ರತಿವಾದಿಯರು ನಮಗೆ ಜಮೀನು ಮಾರಾಟ ಮಾಡಿರುವ ಕಾರಣ ಪರಿಚಯಸ್ಥರು ಆಗಿರುತ್ತಾರೆ. ಮಾರಾಟ ಮಾಡುವ ಮುಂಚೆ ನಮ್ಮ ಯಜಮಾನರಿಗೆ ಪರಿಚಯಸ್ಥರು ಆಗಿರುತ್ತಾರೆ. 10 ವರ್ಷಗಳಿಂದ ಪ್ರತಿವಾದಿಯರು ಪರಿಚಯಸ್ಥರು ಆಗಿರುತ್ತಾರೆ. ನಮ್ಮ ಊರಿನಲ್ಲಿ 500-600 ಜನ ವಾಸಿಸುತ್ತಾರೆ ಎಂದರೆ ಸರಿ. ಪ್ರತಿವಾದಿಯರು ತಮ್ಮ ಜಮೀನನ್ನು ಮಾರಾಟ ಮಾಡುವ ವಿಷಯ ನನ್ನ ಗಂಡನಿಗೆ ತಿಳಿಸಿರುತ್ತಾರೆ. ಆ ಸಮಯದಲ್ಲಿ ನಾನು ಹಾಜರಿದ್ದೇನು. ಪ್ರತಿವಾದಿಯರು ತಮ್ಮ ಜಮೀನನ್ನು ಮಾರಾಟ ಮಾಡುವ ವಿಷಯ ತಿಳಿಸಿದಾಗ ಹಿರಿಯರು ಹಾಜರಿದ್ದರು, ಸದರಿಯವರ ಹೆಸರು ನನಗೆ ಈಗ ನೆನಪಿರುವುದಿಲ್ಲ.

2. ಖರೀದಿ ಮಾಡುವ ಮುಂಚೆ ಕಾಗದ ಪತ್ರಗಳನ್ನು ಪರಿಶೀಲಿಸಿರುತ್ತೇವೆ. ಪ್ರತಿವಾದಿಯ ಹೆಸರಿನಲ್ಲಿ ಇರುವ ಬಾಂಡನ್ನು ನಾನು ನೋಡಿರುತ್ತೇನೆ. ಸದರಿ ಬಾಂಡನ್ನು ನ್ಯಾಯಾಲಯಕ್ಕೆ ಹಾಜರುಪಸಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿಯು ಬಾಂಡನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ.

3. ಸರ್ವೆ ನಂ.202/1 ಕ್ಷೇತ್ರ 2 ಎಕರೆ ಇರುತ್ತದೆ. ಪ್ರತಿವಾದಿಯ ತಾಯಿ ಮತ್ತು ಮಕ್ಕಳು ಇರುತ್ತಾರೆ ಎಂದರೆ ಸರಿ. ಪ್ರತಿವಾದಿಯ ಮಕ್ಕಳು ಹಕ್ಕುದಾರರು ಇರುತ್ತಾರೆ ಎಂದರೆ ಸರಿ. ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವಾ ಜಮೀನಿನ ಚಕಬಂದಿ ಉತ್ತರಕ್ಕೆ ಪ್ರತಿವಾದಿಯ ಜಮೀನು, ದಕ್ಷಿಣಕ್ಕೆ ರಸ್ತೆ, ಪೂರ್ವಕ್ಕೆ ಹಂಚನಾಳ ರವರ ಜಮೀನು, ಪಶ್ಚಿಮಕ್ಕೆ ರೋಳಿ ರವರ ಜಮೀನು ಇರುತ್ತದೆ. 10 ವರ್ಷಗಳ ಹಿಂದೆ ಸಬ್ ರಿಜಿಸ್ಟ್ರರ್ ಕಛೇಗೆ

ಹೋಗಿರುತ್ತೇವೆ. ನನ್ನ ಗಂಡ ಊರಿನ ಜನರಿಗೆ ಅನಾನಕೂಲ ಇದ್ದವರಿಗೆ ಧನ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ.

4. ಪ್ರತಿವಾದಿಯ ತಂದೆಗೆ ಪಾಶ್ಚವಾಯು ಆಗಿತ್ತು ಎಂದರೆ ಸರಿಯಲ್ಲ. ಪಾಶ್ಚವಾಯು ಇರುವ ಕಾರಣ 1 ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನ ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು 5 ಬಡ್ಡಿ ಜಾಸ್ತಿ ಆಗುತ್ತದೆ 2 ಬಡ್ಡಿ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 2 ಬಡ್ಡಿಯನ್ನು ಕೊಟ್ಟರೆ ನನಗೆ ತೊಂದರೆ ಆಗುತ್ತದೆ ಎಂದು ನನ್ನ ಗಂಡ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ತನ್ನ ತಂದೆಗೋಸ್ಕರ 5 ಬಡ್ಡಿಗೆ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಇರುವ ಕಾರಣ ಬಡ್ಡಿ ನೀಡಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ಹಣದ ಭದ್ರತೆಗಾಗಿ ನಿಪಿ-1 ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹಣ ನೀಡಿ 1 ವರ್ಷ 4 ತಿಂಗಳು ಆಗಿರುವ ಕಾರಣ 80,000/- ಬಡ್ಡಿ ಹಣವನ್ನು ಸೇರಿ 1,80,000/- ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1,80,000/- ಬದಲಾಗಿ 2 ಲಕ್ಷ ರಂತೆ ದಾಖಲಾತಿಯನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು 5 ಬಡ್ಡಿ ಜಾಸ್ತಿ ಆಗುತ್ತದೆ 2 ಬಡ್ಡಿ ಮಾಡುವಂತೆ ಪುನಃ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1,80,000/- ಹಣವನ್ನು ಮರಳಿ ನನ್ನ ಗಂಡನಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸನ್ 2015 ರಿಂದ 1,80,000/- ಹಣಕ್ಕೆ 2 ಬಡ್ಡಿಯಂತೆ ಹಣ ನೀಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತೀರಿಕೊಂಡ ನಂತರವು ಸಹ ಪ್ರತಿವಾದಿಯು ಬಡ್ಡಿಯನ್ನು ನೀಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಊರ ಹಿರಿಯರು ಪತ್ರಿ ವ್ಯವಹಾರವನ್ನು ರದ್ದು ಮಾಡಬೇಕೆಂದು ಮೌಖಿಕವಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮುಂದುಡುತ್ತಾ ಬಂದು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

5. ದಾವಾ ಆಸ್ತಿ ನೀರಾವರಿ ಜಮೀನು ಎಂದರೆ ಸರಿ. ದಾವಾ ಆಸ್ತಿ ಊರಿಗೆ ಹೊಂದಿಕೊಂಡಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ಈಗ 50-60 ಲಕ್ಷ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಅಷ್ಟು ಇರಲ್ಲಿಲ್ಲಾ ಎಂದು ನುಡಿಯುತ್ತಾರೆ.

6. ನನ್ನ ಪ್ರಮಾಣ ಪತ್ರವನ್ನು ನಾನೆ ಹೇಳಿ ಬರೆಸಿರುತ್ತೇನೆ. ನನ್ನ ಗಂಡನು 5 ವರ್ಷಗಳ ಹಿಂದೆ ಖರೀದಿ ಮಾಡಿಕೊಂಡಬೇಕೆಂದು ಕೇಳಿರುತ್ತಾರೆ. ನಾನು ವಿದ್ಯಾಭ್ಯಾಸ ಮಾಡಿಲ್ಲ ಕಾರಣ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಒಂದೇ ಬಾರಿ ನನ್ನ ಗಂಡ ಕೇಳಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಯರಿಗೆ 2-3 ವರ್ಷಗಳ ಹಿಂದೆ ನೋಂದಣಿ ಮಾಡಿಕೊಡಬೇಕೆಂದು ಕೇಳಿರುತ್ತೇನೆ. ದಿನಾಂಕ ತಿಂಗಳು ನೆನಪಿರುವುದಿಲ್ಲ.

7. ಪ್ರತಿವಾದಿಗೆ ನಾನು ಮನೆಗೆ ಹೋಗಿ ಮತ್ತು ಫೋನ್ ಮೂಲಕ ಕೇಳಿರುತ್ತೇನೆ. ನಾನು ಮತ್ತು ನನ್ನ ಗಂಡ ಮಾತ್ರ ಕೇಳಿರುತ್ತೇವೆ. ಯಾವ ದಿನಾಂಕದಂದು ಕೇಳಿರುತ್ತೇವೆ ಎಂದು ಹೇಳಲು ಬರುವುದಿಲ್ಲ.

8. ಖರೀದಿ ಕರಾರು ಪತ್ರವನ್ನು ತಹಶೀಲ್ದಾರ ಕಛೇರಿಯಲ್ಲಿ ಮಾಡಿರುತ್ತೇವೆ. ನಾನು, ನನ್ನ ಗಂಡ ಮತ್ತು 1 ಮತ್ತು 2 ನೇ ಪ್ರತಿವಾದಿ ಹಾಜರಿದ್ದರು. ನಮ್ಮ ಪರವಾಗಿ ಇಬ್ಬರೂ ವ್ಯಕ್ತಿಗಳು ಬಂದಿದ್ದರು ಅವರ ಹೆಸರು ರವಣಿ ರಾಠೋಡ, ಕಾಂತು ಗಾಯಕವಾಡ ರವರು ಬಂದಿದ್ದರು. ಬೆಳಿಗ್ಗೆ 9-30 ರಿಂದ 10 ಗಂಟೆ ಸಮಯದಲ್ಲಿ ಬಂದಿದ್ದರು. ನಾವು ಪ್ರತಿವಾದಿಯರು ಮತ್ತು ಸಾಕ್ಷಿದಾರರು ಸಹಿ ಮಾಡಿರುತ್ತೇವೆ. ಯಾವ ದಾಖಲಾತಿಯ ಆಧಾರದ ಮೇರೆಗೆ ಪತ್ರವನ್ನು ತಯಾರಿಸಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುತ್ತದೆ. ಸದರಿ ಪತ್ರದಲಿಲ ಭೋಜಾ ವಗ್ಯೆರೆ ಇದ್ದ ಬಗ್ಗೆ ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ಎಕರೆಗೆ 1 ಲಕ್ಷ ರಂತೆ 2 ಎಕರೆಗೆ 2 ಲಕ್ಷ

ನಿಗದಿಪಡಿಸಲಾಗಿರುತ್ತದೆ. ಸದರಿ ವಿಷಯವನ್ನು ನಮೂದು ಮಾಡಿಲ್ಲ ಎಂದರೆ ಪ್ರತಿವಾದಿಯರು ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ.

9. ಸದರಿ ಪತ್ರದಲ್ಲಿ ಪ್ರತಿವಾದಿಯರಿಗೆ ಹೊರತುಪಡಿಸಿ ಬೇರೆ ಯಾರು ಹಕ್ಕುದಾರರು ಇರುವುದಿಲ್ಲ ಎಂದು ನಮೂದಿಸಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಗೆ ಹೆಂಡತಿ ಮಕ್ಕಳು ಇರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಗೆ ತಾಯಿ, ಹೆಂಡತಿ ಮತ್ತು ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿಯವರ ಒಪ್ಪಿಗೆ ಪ್ರಮಾಣ ಪತ್ರವನ್ನು ಬರೆಸಿಕೊಂಡಿರುವುದಿಲ್ಲ. ದಾವಾ ಆಸ್ತಿಯ ಮೇಲೆ ಪ್ರತಿವಾದಿಯರು ಉಪ ಜೀವನ ನಡೆಸುತ್ತಿದ್ದಾರೆ ಎಂದರೆ ಸರಿ. ಕುಟುಂಬದವರು ದಾವಾ ಆಸ್ತಿಯ ಮೇಲೆ ಅವಲಂಬಿತರಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿ ಇಲ್ಲ ಎಂದರೆ ಸಾಕ್ಷಿಯು ನಮಗೆ 2 ಎಕರೆ ನೀಡಿದ್ದು ಅವರ ಬಳಿ 2 ಎಕರೆ ಇರುತ್ತದೆ ಎಂದು ನುಡಿಯುತ್ತಾರೆ. 4 ಎಕರೆ ಹೊರತುಪಡಿಸಿ ಬೇರೆ ಆಸ್ತಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಯಾವ ದಿನಾಂಕದಂದು ಪ್ರಾಪಂಚಿಕ ಅಡಚಣೆಯ ಸಲುವಾಗಿ ಮಾರಾಟ ಮಾಡಲು ತಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯು ಮಾರಾಟ ಮಾಡಲು ತಗೆದಿದ್ದು 2 ಲಕ್ಷ ಮೌಲ್ಯ ಹೆಚ್ಚಿಗೆ ಆಗಿರುತ್ತದೆ ಎಂದು ಪ್ರತಿವಾದಿಯು ಒಪ್ಪಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ 2 ಲಕ್ಷಗಳಿಗೆ ಒಪ್ಪಿಕೊಂಡಿದ್ದು ಹಿಸಾರ ಅಂತಾ 1,80,000/- ಹಣ ನೀಡಿದ್ದು ಇನ್ನೂ ಬಾಕಿ 20,000/- ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಾಕಷ್ಟು ಬಾರಿ ಕೇಳಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ಪ್ರತಿವಾದಿಯರಿಗೆ ಯಾವ ದಿನಾಂಕದಂದು ನೋಟಿಸು ನೀಡಿರುತ್ತೇವೆ ಎಂದು ಹೇಳಲು ಬರುವುದಿಲ್ಲ. ಪ್ರತಿವಾದಿಯರಿಗೆ ಯಾವುದೇ ನೋಟಿಸ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ಕಡೆಯಿಂದ ಹಣ ತಗೆದುಕೊಂಡ ಕಾರಣ ಖೊಟ್ಟಿಯಾಗಿ ನಿಪಿ-1 ನು

ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಹಾಗೂ ಪ್ರತಿವಾದಿಯ ನಡುವೆ ಖರೀದಿ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-1 ಹಣದ ಭದ್ರತೆಗಾಗಿ ಬರೆದುಕೊಟ್ಟ ದಾಖಲಾತಿ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ 50-60 ಲಕ್ಷ ಕಿಮ್ಮತ್ತು ಆಗಿರುವ ಕಾರಣ ಅದನು ಕಬಳಿಸುವಗೋಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**